12

# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 30-5-2020

### ಛತ್ತೀಸ್‌ಗಢ ಮಾಜಿ ಸಿಎಂ ಜೋಗಿ ನಿಧನ

**ರಾಯಪುರ:** ಛತ್ತೀಸ್‌ಗಢದ ಮೊದಲ ಮುಖ್ಯಮಂತ್ರಿ ಅಜಿತ್ ಜೋಗಿ (74) ಶುಕ್ರವಾರ ಕೊನೆಯುಸಿರೆಳೆದಿದ್ದಾರೆ. ಈ ತಿಂಗಳ ಆರಂಭದಲ್ಲಿ ಎರಡು ಬಾರಿ ಹೃದಯಾಘಾತಕ್ಕೆ ಒಳಗಾಗಿದ್ದ ಅವರಿಗೆ 20 ದಿನಗಳಿಂದ ವೆಂಟಿಲೇಟರ್ ನೆರವು ಕಲ್ಪಿಸಲಾಗಿತ್ತು. ಅಜಿತ್ ಅವರು ಶಾಸಕಿಯಾಗಿರುವ ಪತ್ನಿ ರೇಣು ಜೋಗಿ ಮತ್ತು ಪುತ್ರ ಅಮಿತ್ ಜೋಗಿ ಅವರನ್ನು ಅಗಲಿದ್ದಾರೆ.



ಭೋಪಾಲದ ಮೌಲಾನಾ ಆಜಾದ್ ತಾಂತ್ರಿಕ ಮಹಾವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ಪಡೆದಿದ್ದ ಜೋಗಿ, ಕೆಲಕಾಲ ರಾಯಪುರದ ಎನ್‌ಐಟಿಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಐಪಿಎಸ್ ಮತ್ತು ಐಎಎಸ್ ಎರಡರಲ್ಲೂ ತೇರ್ಗಡೆಯಾಗಿದ್ದರೂ, ನಂತರದ ದಿನಗಳಲ್ಲಿ ಆರಿಸಿಕೊಂಡಿದ್ದು ರಾಜಕಾರಣವನ್ನು. ಕಾಂಗ್ರೆಸ್ ಮೂಲಕ ರಾಜಕೀಯ ಜೀವನ ಆರಂಭಿಸಿದ ಅವರು 2016ರವರೆಗೂ ಕಾಂಗ್ರೆಸ್‌ನಲ್ಲಿಯೇ ಇದ್ದರು. 2000ನೇ ಇಸವಿಯ ನ.9ರಂದು ಛತ್ತೀಸ್‌ಗಢ ರಾಜ್ಯ ರಚನೆಯಾದಾಗ ಮೊದಲ ಮುಖ್ಯಮಂತ್ರಿಯಾಗಿ ಮೂರು ವರ್ಷ ಸೇವೆ ಸಲ್ಲಿಸಿದರು. 2016ರಲ್ಲಿ ಪುತ್ರ ಅಮಿತ್ ಜೋಗಿ ಜತೆಗೂಡಿ ಜನತಾ ಕಾಂಗ್ರೆಸ್ ಛತ್ತೀಸ್‌ಗಢ ಸ್ಥಾಪಿಸಿದರು. 2018ರ ವಿಧಾನಸಭೆ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡುವಲ್ಲಿ ಪಕ್ಷ ವಿಫಲವಾಯಿತು.